ಬರುತ್ತಿದ್ದಂತೆ ರಾಮ್ ಲಾಲನಿಗೆ ಮೂಗಿಗೆ ಕುಡಿತದ ವಾಸನೆ ಬಡಿದಿತ್ತು. ಅವನು ಕೆಲಸ ಮಾಡುವ ಫ್ಯಾಕ್ಟರಿಯಲ್ಲೂ ಸುಮಾರು ಜನ ಕುಡಿಯುತ್ತಿದ್ದರು. ಅವರು ಅವನನ್ನೂ ಅನೇಕ ಸಾರಿ ಕುಡಿಯಲು ಕರೆದಿದ್ದರು. ಆದರೆ ರಾಮ್ ಲಾಲನಿಗೆ ಅದರ ವಾಸನೆ ಕಂಡರೆ ಆಗುತ್ತಿರಲಿಲ್ಲ. ಸಿಗರೇಟು ಕೂಡ ಅವನು ಸೇದುತ್ತಿರಲಿಲ್ಲ. ತಮ್ಮನನ್ನು ನೋಡಿ ಕ್ಷಣ ಗಾಬರಿಪಟ್ಟುಕೊಂಡ. ತಾರಾನಾಥ ಭಯದಿಂದ ಮುಜುಗರ ಪಟ್ಟು ಕೊಂಡೇ, ''ದಿನಾ ಡ್ರೈವಿಂಗ್ ಮಾಡುವುದರಿಂದ ಉಷ್ಣ ಜಾಸ್ತಿಯಾಗಿದೆ ಅಣ್ಣಾ, ರಫೀಕ್ ಸಿಕ್ಕಿದ್ದ. ವಾರಕ್ಕೊಂದು ಬಿಯರ್ ಕುಡಿದರೆ ಕಡಿಮೆಯಾಗುತ್ತೆ ಅಂತ ಹೇಳ್ದ. ನಿಂಗೂ ದೋಸ್ತಿಯಂತೆ ಅವನು. ಅವನಿಗೂ ಉಷ್ಣವಂತೆ. ಬೇಡ ಬೇಡವೆಂದರೂ ಅವನೇ ಬಿಯರ್ ಕುಡಿಸಿದ. ನೀನು ಬೇಜಾರು ಮಾಡ್ಕೊತೀಯ ಅಂದ್ರೂ ಕೇಳ್ಳಿಲ್ಲ. ಅದೂ ಅಲ್ಲದೆ ಅದ್ಯಾವುದೋ ಕಾಯಿಲೆ ಬಗ್ಗೆ ಜನ ಮಾತಾಡ್ಕೋತಾ ಇದಾರಲ್ಲ ಅದಕ್ಕೆ ವಿಸ್ಕಿ, ಬಿಯರ್ ಒಳ್ಳೇದಂತೆ. ಹಂಗಂತ ರಫೀಕನೇ ಹೇಳಿದ್ದು...'' ತಾರಾನಾಥ ಕ್ಷಮೆ ಕೇಳುವವನಂತೆ ಮಾತನಾಡಿದ್ದ. ರಫೀಕ್, ರಾಮ್ ಲಾಲನಿಗೂ ಅಲ್ಲಿಗೆ ಬಂದಾಗಿನಿಂದಲೂ ತುಂಬಾ ಪರಿಚಯವಿದ್ದ. ಜವಾಬ್ದಾರಿ ಯುವಕ. ಮುಸ್ಲಿಮರಲ್ಲಿ ಕುಡಿಯುವುದು ನಿಷೇಧವೆಂದೂ, ಆದರೂ ಉಷ್ಣದಿಂದಾಗಿ ಅಪರೂಪಕ್ಕೆ ಒಂದೊಂದು ಬಿಯರ್ ಕುಡಿಯುವುದಾಗಿಯೂ ಹೇಳಿದ್ದ. ಡ್ರೈವರ್‌ಗಳು ಸದಾ ಸೀಟಿನ ಮೇಲೆ ಕುಳಿತಿರುವುದರಿಂದ ವಿಪರೀತ ಉಷ್ಣವಾಗುತ್ತದೆಂದು ಸುಮಾರು ಜನ ಹೇಳುವುದನ್ನು ಕೇಳಿದ್ದ. ಆದರೂ ಕಳವಳಗೊಂಡಿದ್ದ. ''ಉಷ್ಣ ಆದರೆ ಮಜ್ಜಿಗೆ ಮತ್ತು ಬೆಣ್ಣೆ ಜಾಸ್ತಿ ಉಪಯೋಗಿಸಬೇಕು. ಕುಡಿಯುವುದು ರೂಢಿಯಾಗಿಬಿಟ್ಟರೆ ಅದರ ಕಡಗೇ ಪ್ರಾಣ ಎಳೆಯುತ್ತಿರುತ್ತದೆ. ನೀನೂ ನೋಡಿದ್ದೀಯಲ್ಲ, ಸಂಜೆ ಹೊತ್ತು ಎಷ್ಟೊಂದು ಜನ ಕುಡಿದು ಬಸ್‌ಸ್ಟ್ಯಾಂಡ್, ಫುಟ್‌ಪಾತ್ ಮೇಲೆ ಉರುಳಿರ್ತಾರೆ. ಇದರಿಂದ ಎಷ್ಟು ಸಂಸಾರಗಳು ಬೀದಿ ಪಾಲಾಗಿಲ್ಲ... ನಮ್ಮೂರಲ್ಲೂ ಎಷ್ಟು ಜನ ಹಾಗಾಗಿಲ್ಲ... ನೀನೂ ನೋಡಿದ್ದೀಯಲ್ಲ...'' ದೀರ್ಘವಾಗಿಯೇ ಬುದ್ಧಿವಾದ ಹೇಳಿದ್ದ.

''ಹಾಗೇ ಆಯ್ತಣ್ಣ, ಇನ್ಮೇಲೆ ಹಾಗೆಲ್ಲ ಮಾಡಲ್ಲ'' ಎಂದಿದ್ದ ತಮ್ಮನಿಗೆ, ''ಬೇಸರ ಮಾಡಿಕೊಳ್ಳಬೇಡ ತಾರಾ, ಏನು ಮಾಡುವುದು ನಾವು ತಂದೆ ತಾಯಿ ಮುಖ ನೋಡಬೇಕಲ್ವಾ...'' ಎಂದು ಸಮಾಧಾನ ಹೇಳಿದ್ದ.

ತಮ್ಮ ತಾರಾನಾಥ ಊಟ ಮಾಡಿ ಮಲಗಿದ ಕೂಡಲೇ ನಿದ್ರೆಗೆ ಜಾರಿ ಸಣ್ಣಗೆ ಗೊರಕೆ ಹೊಡೆಯತೊಡಗಿದ್ದ. ಅರ್ಧ ರಾತ್ರಿ ಕಳೆದರೂ ರಾಮ್ ಲಾಲನಿಗೆ ನಿದ್ದೆ ಬರಲಿಲ್ಲ. ಹೊಟ್ಟೆಯಲ್ಲಿ ಏನೋ ಒಂಥರಾ ಸಂಕಟ ಶುರುವಾಗಿತ್ತು. ಎದೆ ಭಾರವಾದಂತೆ ತಳಮಳ ಉಂಟಾಗಿತ್ತು. ಇದಕ್ಕೆ ಕಾರಣ ತಮ್ಮ ಬಿಯರ್ ಕುಡಿದು ಬಂದದ್ದು ಖಂಡಿತಾ ಅಲ್ಲವಾಗಿತ್ತು. ಈ ಎರಡು ದಿನಗಳಿಂದ ಅವಳು ಕಂಡಿರಲಿಲ್ಲ! ಅವಳು ಕಣ್ಣೋಟದಲ್ಲಿ ಪರಿಚಯವಾದದ್ದು ನಾಲ್ಕು ತಿಂಗಳ ಹಿಂದೆ. ಅವನು ದಿನಾಲೂ ತನ್ನ ಫ್ಯಾಕ್ಟರಿಗೆ ಹೋಗಲು ಒಂಬತ್ತು ಗಂಟೆಗೆಲ್ಲ ಬಸ್ ನಿಲ್ದಾಣಕ್ಕೆ ಹೋಗಿ ಅಲ್ಲಿಂದ ನಾಲ್ಕು ಕಿಲೋಮೀಟರ್ ದೂರವಿದ್ದ ಫ್ಯಾಕ್ಟರಿಗೆ ಸಿಟಿ ಬಸ್ ಹಿಡಿದು ಹೋಗುತ್ತಿದ್ದ. ಹೀಗೆ ಓಡಾಡುವಾಗ ಅವಳು ರಾಮ್ ಲಾಲನ ಕಣ್ಣಿಗೆ ಬಿದ್ದಿದ್ದಳು. ಅವಳೂ ಪ್ರತಿನಿತ್ಯವೂ ಅವನು ಹೋಗುತ್ತಿದ್ದ ಬಸ್ಸಿನಲ್ಲೇ ಹೋಗುತ್ತಿದ್ದಳು. ಅವನ ಫ್ಯಾಕ್ಟರಿಯ ಸ್ಟಾಪಿಗಿಂತ ಒಂದು ಸ್ಟಾಪ್ ಹಿಂದೆಯೇ ಇಳಿಯುತ್ತಿದ್ದಳು. ಎರಡೇ ದಿನದಲ್ಲಿ ಅವಳು ಪ್ಲಾಸ್ಟಿಕ್ ಫ್ಯಾಕ್ಟರಿಗೆ ಕೆಲಸಕ್ಕೆ ಹೋಗುವುದು ತಿಳಿದಿತ್ತು. ಅದು ದಿಲ್ಲಿಯಲ್ಲಿಯೇ ದೊಡ್ಡ ಪ್ಲಾಸ್ಟಿಕ್ ಫ್ಯಾಕ್ಟರಿ. ಪ್ಲಾಸ್ಟಿಕ್ ಪೀಠೋಪಕರಣಗಳನ್ನಲ್ಲದೆ ನಾನಾ ಬಗೆಯ ಪ್ಲಾಸ್ಟಿಕ್ ಆಟಿಕೆ ಮತ್ತು ಗೊಂಬೆಗಳನ್ನು ಅಲ್ಲಿ ತಯಾರಿಸಲಾಗುತ್ತಿತ್ತು. ತಮ್ಮ ತಾರಾನಾಥನನ್ನು ದಿಲ್ಲಿಗೆ ಕರೆದುಕೊಂಡು ಬಂದಾಗ ಅವನಿಗೆ ಕೆಲಸಕ್ಕಾಗಿ ಆ ಫ್ಯಾಕ್ಟರಿಯಲ್ಲಿ ಪ್ರಯತ್ನ ಮಾಡಿದ್ದ. ಆದರೆ ಸಿಕ್ಕಿರಲಿಲ್ಲ. ದಿನನಿತ್ಯದ ಪ್ರಯಾಣದಲ್ಲಿ ಅವಳೂ ಒಮ್ಮೆ ಇವನನ್ನು ನೋಡಿದ್ದಳು. ಅಂದಿನಿಂದ ಪ್ರತಿನಿತ್ಯವೂ ಒಬ್ಬರನ್ನೊಬ್ಬರು